


# ಹೃದಯ ನಿರ್ಲಕ್ಷಿಸದಿರು ಗೆಳೆಯ...

ಜಾಗತಿಕವಾಗಿ ಹೃದಯಾಘಾತದಿಂದ ಸಾವನ್ನಪ್ಪುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಹದಿವಯಸ್ಸಿನಿಂದ ಹಿಡಿದು ವೃದ್ಧರವರೆಗೆ ಯಾವ ವಯಸ್ಸಿನವರಲ್ಲಾದರೂ ಹೃದಯಾಘಾತವಾಗಿ ಚಿಕಿತ್ಸೆ ಪಡೆಯುವ ಮುನ್ನವೇ ಇಹಲೋಹ ತ್ಯಜಿಸುವುದು ಆತಂಕದ ವಿಚಾರ. ಹೃದಯ ರಕ್ತನಾಳ ಸಮಸ್ಯೆಯಿಂದ ಲಿಪೊ ಪ್ರೊಟೀನ್ ಅಂಶ ಹೆಚ್ಚುವುದರಿಂದ ಸಡನ್ ಹಾರ್ಟ್ ಅಟ್ಯಾಕ್ ಆಗುತ್ತಿದೆ ಎಂಬುದನ್ನು ತಜ್ಞರು ಮನಗಂಡಿದ್ದಾರೆ. ಈ ಹಿನ್ನೆಲೆಯಲ್ಲಿ ವಿಶ್ವಮಟ್ಟದಲ್ಲಿ ಹೃದ್ರೋಗ ತಜ್ಞರು ನಡೆಸಿದ ಸಂವಾದದ ಸಾರಾಂಶ ಇಲ್ಲಿದೆ.

■ ಉಮಾ ಅನಂತ್

ಪ್ರತಿಕ್ಷಣ ಮಿಡಿಯುತ್ತಲೇ ಇರುವ ಹಿಡಿಯಷ್ಟಿರುವ ಹೃದಯದ ಕೆಲಸ ಗಡಿಯಾರದ ಮುಳ್ಳಿನಂತೆ ನಿರಂತರ. ಬಡಿತದಲ್ಲಿ ತುಸು ಹೆಚ್ಚು ಕಡಿಮೆಯಾದರೂ ಇಡೀ ದೇಹದ ಆರೋಗ್ಯವೇ ತಡಬಡಿಸುತ್ತದೆ, ಜೀವ ಮುಂದೇನೋ ಎಂಬ ಆತಂಕಕ್ಕೆ ಕಾರಣವಾಗುತ್ತದೆ. ಈಗೀಗ ಹೃದಯಾಘಾತ, ಹೃದಯ ಸ್ಥಂಭನಕ್ಕೆ ವಯಸ್ಸಿನ ಮಿತಿಯಿಲ್ಲ, ಕಾರಣವೂ ಹತ್ತು ಹಲವು. ಜಾಗತಿಕ ಮಟ್ಟದಲ್ಲಿ ಹೃದಯದ ಸುದ್ದಿ ಈಗೀಗ ಹೆಚ್ಚು ಸದ್ದು ಮಾಡುವುದಕ್ಕೂ ಕಾರಣ, ಹದಿಹರೆಯದವರಲ್ಲೂ ಹೃದಯಾಘಾತ, ನಡುವಯಸ್ಸಿನವರಲ್ಲೂ ಹೃದಯ ಸ್ಥಂಭನ. ಮುಪ್ಪಡರುವ ಮುನ್ನವೇ ಇಹಲೋಕದಿಂದ ಪಯಣ.

ಹೃದಯಾಘಾತದಿಂದ ಸಾವಿನ ಸಂಖ್ಯೆ ಹೆಚ್ಚಾಗಲು ಕಾರಣವೇನು? 'ಗ್ಲೋಬಲ್ ಹಾರ್ಟ್ ಹಬ್' ಮತ್ತು 'ನೊವಾರ್ಟಿಸ್ ಸಂಸ್ಥೆ' ಈಚೆಗೆ ವಿಶ್ವದ ನುರಿತ ಹೃದಯ ತಜ್ಞರು ನಡೆಸಿದ ವೆಬಿನಾರ್‌ನಲ್ಲಿ 'ಸಡನ್ ಹಾರ್ಟ್ ಅಟ್ಯಾಕ್'ಗೆ ಕಾರಣ, ನಿವಾರಣೋಪಾಯ, ಚಿಕಿತ್ಸೆ ಬಗ್ಗೆ ಬೆಳಕು ಚೆಲ್ಲಿದರು. ಆನುವಂಶಿಕ ಸಮಸ್ಯೆಯಿಂದ ಭಾರತದಲ್ಲಿ ನಾಲ್ಕು ಜನರಲ್ಲಿ ಒಬ್ಬರಿಗೆ ಹೃದಯ ರಕ್ತನಾಳ (ಕಾರ್ಡಿಯೊ ವ್ಯಾಸ್ಕುಲರ್ ಡಿಸೀಸ್) ಕಾಯಿಲೆ ಬರುತ್ತಿದೆ. ಇದಕ್ಕೆ ಎಲಿವೇಟೆಡ್ ಲಿಪೊಪ್ರೊಟೀನ್ ಕಾರಣ ಎಂಬುದು ತಜ್ಞರ ಅನಿಸಿಕೆ. ಈ ಕುರಿತು ಎಚ್ಚರಿಕೆ ವಹಿಸಬೇಕು ಎಂಬ ತೀರ್ಮಾನವನ್ನು ತಜ್ಞ ವೈದ್ಯರು ಕೈಗೊಂಡಿದ್ದು, ಆರಂಭದ ಹಂತದಲ್ಲೇ ಎಚ್ಚರಿಕೆ ವಹಿಸುವ ಬಗ್ಗೆ ಮಹತ್ವದ ನಿರ್ಣಯವನ್ನೂ ಕೈಗೊಳ್ಳಲಾಯಿತು.

ಜಾಗತಿಕವಾಗಿ ಹೃದಯ ರಕ್ತನಾಳದ ಕಾಯಿಲೆ (**cardiovascular desease**–ಸಿವಿಡಿ)ಯಿಂದ ಪ್ರತೀವರ್ಷ ಸುಮಾರು 1.8 ಕೋಟಿ ಜನರು ಅಸುನೀಗುತ್ತಾರೆ. ಇದರಲ್ಲಿ ಸುಮಾರು ಐದನೇ ಒಂದು ಭಾಗದಷ್ಟು ಸಾವು ಭಾರತದಲ್ಲಿಯೇ ಸಂಭವಿಸುತ್ತಿದೆ. ಇದಕ್ಕೆ ಅರಿವಿನ ಕೊರತೆಯೇ ಕಾರಣ ಅಲ್ಲದೆ, ಇದು ಕ್ಯಾನ್ಸರ್‌ಗಿಂತಲೂ ಅಪಾಯಕಾರಿ ಎಂಬುದು ಅತ್ಯಂತ ಕಳವಳದ ವಿಚಾರ.

ಜಗತ್ತಿನ ಅನೇಕ ರಾಷ್ಟ್ರಗಳಲ್ಲಿನ ಜನರಿಗೆ ಹೃದಯದ ಕಾಯಿಲೆಗೆ ಆನುವಂಶೀಯತೆಯೂ ಕಾರಣ ಎಂಬ ವಿಷಯವೇ ತಿಳಿದಿಲ್ಲ. ವೈದ್ಯರ ತಂಡ ಏಷ್ಯಾ ಪೆಸಿಫಿಕ್ ಮತ್ತು ಮಧ್ಯಪ್ರಾಚ್ಯದಲ್ಲಿ